ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕ ಃ **20.02.2025**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಶ್ರೀ ಎಸ್.ಆರ್.ಎಂ ವಕೀಲರಿಂದ

1. ನಾನು ಎಂ.ಎ ಪದವಿದರ. ನನ್ನ ಐಚ್ಚಿಕ ವಿಷಯ ಎಕನಾಮಿಕ್. ನನ್ನ ದೂರಿನಲ್ಲಿ ಕಾಮನ್ ಫ್ರೆಂಡ್ ಮೂಲಕ ಆರೋಪಿ ಪರಿಚಯ ಆಗಿರುತ್ತದೆ ಎಂದು ಬರೆದಿದ್ದು ಅವರ ಹೆಸರು ಆನಂದ್. ಆನಂದ್ ಹೆಸರನ್ನು ದೂರಿನಲ್ಲಿ ಬರೆಯಲು ನನಗೆ ತೊಂದರೆ ಇರಲಿಲ್ಲ. ನಾನು ಮತ್ತು ಆರೋಪಿ ಬೇರೆ ಬೇರೆ ಕಡೆ ಸೆಮಿನಾರ್ ಗಳನ್ನು ಅಟೆಂಡ್ ಮಾಡಿದ್ದು ಎಂದು ಹೇಳಿದ್ದು ಹೂಡಿಕೆ ಸಲುವಾಗಿ ಸೆಮಿನಾರ್ ಇತ್ತು. ಎಷ್ಟು ಕೋಟಿ ಅಥವಾ ಎಷ್ಟು ಲಕ್ಷಕ್ಕೆ ಹೂಡಿಕೆ ಮಾಡಿರುತ್ತೀರಾ ಎಂದರೆ ಸಾಕ್ಷಿದಾರರು ಹೂಡಿಕೆ ಯಾವ ರೀತಿ ಮಾಡಬೇಕು, ಎಲ್ಲಿ ಮಾಡಬೇಕು ಎನ್ನುವ ಮಾಹಿತಿ ನೀಡುತ್ತಿದ್ದರು ಎಂದು ಹೇಳುತ್ತಾರೆ. ನಾನು ಮತ್ತು ಆರೋಪಿ ಸೆಮಿನಾರ್ ಅಟೆಂಡ್ ಮಾಡಲು ಹೋಗುತ್ತಿದ್ದೆವು. ಸ್ಯಾಂಕಿ ಎನ್ನುವವರು ಸೆಮಿನಾರ್ ಗಳನ್ನು ಮಾಡುತ್ತಿದ್ದರು. ಸ್ಯಾಂಕಿ ಬಳಿ ನಾನು ಯಾವುದೇ ಹೂಡಿಕೆ ಮಾಡಿರುವುದಿಲ್ಲ.

2. ಹಣ ಹೂಡಿಕೆ ಮಾಡಲು ನನಗೆ ಆರೋಪಿ ಹೇಳಿರುತ್ತಾರೆ. ಆರೋಪಿ ಇಷ್ಟೇ ಹಣ ಹೂಡಿಕೆ ಮಾಡಿ ಎಂದು ನನಗೆ ಹೇಳಿರಲಿಲ್ಲ. ನನ್ನ ಬಳಿ ರೂ. 28 ಲಕ್ಷ ಹಣ ಇದ್ದು ನಾನು ಅಷ್ಟು ಹಣವನ್ನು ಆರೋಪಿ ಬಳಿ ಹೂಡಿಕೆ ಮಾಡಿರುತ್ತೇನೆ. ನಾನು ರೂ. 28 ಲಕ್ಷ ಹಣ ಹೂಡಿಕೆ ಮಾಡಿದಾಗ ಆರೋಪಿಯ ಜೊತೆ ಯಾವುದೇ ಕರಾರು ಪತ್ರ ಮಾಡಿಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಹೂಡಿಕೆ ಮಾಡಿದ ದಿನ ನ್ಯಾಯಾಲಯಕ್ಕೆ ಹಾಜರುಪಡಿಸಿದ ಚೆಕ್ಕನ್ನು ನನಗೆ ಬರೆದು ಕೊಟ್ಟಿರುತ್ತಾರೆ. ಆರೋಪಿ ನನಗೆ ಪ್ರತಿ ತಿಂಗಳು ಶೇ. 15 ರಷ್ಟು ಷೇರ್ ಮೊತ್ತ ಕೊಡುತ್ತೇನೆಂದು ಹೇಳಿದ್ದರು. ಶೇ. 15 ರಷ್ಟು ಷೇರು ಮೊತ್ತ ಕೊಡುವ ಬಗ್ಗೆ ಲಿಖಿತವಾಗಿ ನಮ್ಮಿಬ್ಬರ ಮಧ್ಯ ಕರಾರು ಆಗಿರುವುದಿಲ್ಲ. ನಾನು ಆರೋಪಿಯ ಬಳಿ ರೂ. 28 ಲಕ್ಷ ಹೂಡಿಕೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ಮಧ್ಯ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

3. ರೂ. 28 ಲಕ್ಷ ಹಣವನ್ನು ನಾನು ಬ್ಯಾಂಕ್ ವರ್ಗಾವಣೆ ಮೂಲಕ ಆರೋಪಿಗೆ ಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ರೂ. 20 ಲಕ್ಷ ಬ್ಯಾಂಕ್ ವರ್ಗಾವಣೆ ಮೂಲಕ ಮತ್ತು ರೂ. 8 ಲಕ್ಷ ನಗದು ಹಣ ಕೊಟ್ಟಿರುತ್ತೇನೆ. ನಿಪಿ-6 ರ ಪ್ರಕಾರ ದಿಃ 23.01.2023 ರಂದು ರೂ. 5 ಲಕ್ಷ ಮತ್ತು ರೂ. 6 ಲಕ್ಷ ವರ್ಗಾವಣೆ ಮಾಡಿರುತ್ತೇನೆಂದರೆ ಸರಿ. ದಿಃ 31.12.2022 ರಂದು ರೂ. 5 ಲಕ್ಷ

ವರ್ಗಾವಣೆ ಮಾಡಿರುತ್ತೇನೆಂದರೆ ಸರಿ. ದಿಃ 01.01.2023 ರಂದು ರೂ. 5 ಲಕ್ಷ ವರ್ಗಾವಣೆ ಮಾಡಿರುತ್ತೇನೆಂದರೆ ಸರಿ. ಆರೋಪಿಗೆ ಹಣ ಕೊಡಲು ನನ್ನ ಅಣ್ಣಾ ಆನಂದ್ ಭಜಂತ್ರಿ ಹೇಳಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಆನಂದ್ ಭಜಂತ್ರಿಯವರಿಂದ ಆರೋಪಿ ನನಗೆ ಪರಿಚಯವಾದ್ದರಿಂದ ಅವರ ಮೂಲಕ ಕೊಟ್ಟಿರುತ್ತೇನೆಂದು ಹೇಳುತ್ತಾರೆ. ಆನಂದ್ ಭಜಂತ್ರಿ ಖಾಸಗೀ ಕೆಲಸ ಮಾಡುತ್ತಾರೆ.

4. ನಾನು ಮತ್ತು ಆರೋಪಿ ಸೇರಿ ಸ್ಯಾಂಕಿ ರವರೊಂದಿಗೆ ಬೆಂಗಳೂರು, ಗೋವಾ ಮತ್ತು ಮುಂಬೈನಲ್ಲಿ ಸೆಮಿನಾರ್ ಗಳನ್ನು ಅಟೆಂಡ್ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಹಾಜರುಪಡಿಸುತ್ತೇನೆಂದು ಹೇಳುತ್ತಾರೆ. ನಾನು ಮತ್ತು ಆರೋಪಿ ಯಾವುದೇ ಸೆಮಿನಾರ್ ಗೆ ಹೋಗಿಲ್ಲವಾದ್ದರಿಂದ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸೆಮಿನಾರ್ ಗಳಲ್ಲಿ ಹೂಡಿಕೆ ಮಾಡುವ ಸಲುವಾಗಿ ಒತ್ತಾಯ ಮತ್ತು ಒಳಸಂಚು ಮಾಡುವುದಿಲ್ಲ. ನಮಗೆ ಇಷ್ಟ ಇದ್ದರೇ ಬಂಡವಾಳ ಹೂಡಿಕೆ ಮಾಡಬಹುದು ಎಂದರೆ ಸರಿ. ಆರೋಪಿ ನನಗೆ ಬಂಡವಾಳ ಹೂಡಲು ಪ್ರಚೋದನೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

5. ಆರೋಪಿ ನನಗೆ ಪ್ರತಿ ತಿಂಗಳು ರೂ. 4,50,000 ದಂತೆ ಒಟ್ಟು ರೂ. 10 ಲಕ್ಷ ಹಣ ಕೊಟ್ಟಿರುತ್ತಾರೆ. ರೂ. 10 ಲಕ್ಷ ಹಣ ಆರೋಪಿ ನನಗೆ ಕೊಟ್ಟ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಆರೋಪಿ ಮತ್ತು ನನ್ನ ಅಣ್ಣಾ ಆನಂದ್ ಭಜಂತ್ರಿ ಸ್ನೇಹಿತರು ಎಂದರೆ ಸರಿ. ಆರೋಪಿ ಮನೆ ಕಟ್ಟಬೇಕಾದರೆ ಆರೋಪಿ ನನ್ನ ಅಣ್ಣನಿಂದ ರೂ. 20 ಲಕ್ಷ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ದಾಖಲೆ ಆರೋಪಿ ನನ್ನ ಅಣ್ಣನಿಗೆ ಬರೆದು ಕೊಟ್ಟಿದ್ದು ಅದರ ಬಗ್ಗೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ದಾಖಲೆ ಪ್ರನೋಟ್ ಮೂಲ ಪ್ರತಿ ನನ್ನ ಅಣ್ಣನ ಬಳಿ ಇದೆ ಎಂದರೆ ಸರಿಯಲ್ಲ. ಆರೋಪಿ ಭದ್ರತೆಗಾಗಿ ನನ್ನ ಅಣ್ಣನಿಗೆ ನಿಪಿ-1 ರ ಚೆಕ್ಕನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ.

6. ಆರೋಪಿಯಿಂದ 9 ಬಾರಿ ಖಾತಾ ವರ್ಗಾವಣೆ ಮೂಲಕ ರೂ. 13,03,500 ನನಗೆ ಸೇರಿರುತ್ತದೆ ಎಂದರೆ ಸಾಕ್ಷಿದಾರರು ರೂ. 10 ಲಕ್ಷ ಮಾತ್ರ ಸೇರಿರುತ್ತದೆ ಎಂದು ಹೇಳುತ್ತಾರೆ. ರೂ. 13,03,500 ರ ಪೈಕಿ ನನಗೆ ರೂ. 8,43,000 ಲಕ್ಷ ಮಾತ್ರ ಜಮಾ ಆಗಿರುತ್ತದೆ ಎಂದರೆ ಸರಿ. ನನ್ನ ಅಣ್ಣನ ಖಾತೆಗೆ ರೂ. 5,16,000 ಆರೋಪಿಯಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಂದು ವೇಳೆ ಆರೋಪಿಯಿಂದ ನನ್ನ ಅಣ್ಣನ ಖಾತೆಗೆ ವರ್ಗಾವಣೆಗೊಂಡರೇ ತಕ್ಷಣ

ನನ್ನ ಅಣ್ಣ ನನ್ನ ಖಾತೆಗೆ ವರ್ಗಾಯಿಸುತ್ತಾರೆಂದು ಹೇಳುತ್ತಾರೆ. ನನ್ನ ಅಣ್ಣನ ಹೇಳಿಕೇಯ ಮೇರೆಗೆ ರೂ. 21 ಲಕ್ಷ ಆರೋಪಿಗೆ ಕಳುಹಿಸಿರುತ್ತೇನೆಂದರೆ ಸಾಕ್ಷಿದಾರರು ನಾನು, ನನ್ನ ಅಣ್ಣ ಮತ್ತು ಆರೋಪಿ ಸೇರಿ ಚರ್ಚಿಸಿ ರೂ. 21 ಲಕ್ಷ ಕಳುಹಿಸಿರುತ್ತೇನೆಂದು ಹೇಳುತ್ತಾರೆ. ನಾನು, ನನ್ನ ಅಣ್ಣ ಮತುತ ಆರೋಪಿ ಸೆಮಿನಾರ್ ನಲ್ಲಿ ಚರ್ಚಿಸಿದ ವಿಷಯ ನನ್ನ ದೂರಿನಲ್ಲಿ ಬರೆದಿಲ್ಲ ಎಂದರೆ ಸರಿ. ನಾನು ಯಾವತ್ತು ಆರೋಪಿಯ ಜೊತೆ ಸೆಮಿನಾರ್ ನಲ್ಲಿ ಚರ್ಚಿಸಿ ಬಂಡವಾಳ ಹೂಡಿಕೆ ಮಾಡಿಲ್ಲ ಎಂದರೆ ಸರಿಯಲ್ಲ.

7. ರೂ. 28 ಲಕ್ಷ ತೀರುವಳಿ ಮಾಡುವ ಸಲುವಾಗಿ ಆರೋಪಿ ನನಗೆ ನಿಪಿ-1 ರ ಚೆಕ್ಕನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಆರೋಪಿಗೆ ಮನೆ ಕಟ್ಟಲು ಕೊಡುವ ಸಾಲದ ಸಂಬಂಧದ ತೀರುವಳಿಗಾಗಿ ನಿಪಿ-1 ರ ಚೆಕ್ಕನ್ನು ನನ್ನ ಅಣ್ಣನಿಗೆ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಆರೋಪಿ ನನಗೆ ರೂ. 28 ಲಕ್ಷ ಹಣ ಕೊಡುವ ಬಾದ್ಯತೆ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಈಗ ರೂ. 7 ಲಕ್ಷ ಕೊಡುವ ಬಾದ್ಯತೆ ಹೊಂದಿರುತ್ತಾರೆಂದರೆ ಸರಿಯಲ್ಲ. ರೂ. 7 ಲಕ್ಷದಲ್ಲಿ ನನ್ನ ಅಣ್ಣನಿಗೆ ಕೊಟ್ಟ ರೂ. 5,16,000 ಕಳೆದರೆ ಉಳಿದ ಹಣ ಮಾತ್ರ ಆರೋಪಿ ಕೊಡಲು ಬಾದ್ಯಸ್ಥರಾಗಿರುತ್ತಾರೆಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ಸೇರಿ ನಿಪಿ-1 ರ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ನಾನು ಕೊಟ್ಟ ಹಣಕ್ಕಿಂತ ಹೆಚ್ಚಿನ ಹಣ ಚೆಕ್ಕಿನಲ್ಲಿ ಬರೆದು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

34 ನೇ ಎಸಿಜೆಎಂ ನ್ಯಾಯಾಧೀಶರು,
ಬೆಂಗಳೂರು.